**ದಿನಾಂಕಃ 15-07-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನಾನು 11 ನೇ ಪ್ರತಿವಾದಿಯ ಜಿ ಪಿ ಎ ಹೋಲ್ಡರ್ ಆಗಿ ಈ ದಿವಸ ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಂದುವರೆದ ಮುಖ್ಯ ವಿಚಾರಣೆ 11 ನೇ ಪ್ರತಿವಾದಿ ಪರ ಶ್ರೀ ಎಸ್.ಎ.ಕೆ ವಕೀಲರಿಂದಃ**

ನನ್ನ ಹೆಂಡತಿ 11 ನೇ ಪ್ರತಿವಾದಿ ಶ್ರೀಮತಿ ಸಬಿನಾ ರವರು ಈ ಕೇಸಿನಲ್ಲಿ ವಿಚಾರಣೆ ನಡೆಸಲು ನನ್ನ ಪರವಾಗಿ ನೋಟರಿಯವರ ಮುಂದೆ ಬರೆದುಕೊಟ್ಟಿರುವ ಜಿ ಪಿ ಎ ಯನ್ನು ಹಾಜರುಪಡಿಸಿದ್ದು ಅದನ್ನು ನಿ ಡಿ -28 ಎಂದು, ಕೋಡಿಯಾಲ ಗ್ರಾಮ ಪಂಚಾಯಿತಿಯವರು ಕೊಟ್ಟಿರುವ ಕರ ನಿರ್ಧರಣ ವಸೂಲಾತಿ ಪಟ್ಟಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ಕ್ರಮವಾಗಿ ನಿ ಡಿ -29 ರಿಂದ ನಿ ಡಿ - 39 ಎಂದು, 702/12 ಎ ಸ್ವತ್ತಿನ ಈ ಸ್ವತ್ತು ದಾಖಲೆಯನ್ನು ನಿ ಡಿ -40 ಎಂದು, ಮನೆ ಕರ ನಿರ್ಧರಣ ಪಟ್ಟಿಗಳನ್ನು ನಿ ಡಿ -41 ರಿಂದ 44 ಎಂದು, ದಿನಾಂಕ 21-12-2021 ರಂದು ಪಂಚಾಯಿತಿಯವರು ಮಾಡಿರುವ ಠರಾವಿನ ದೃಢೀಕೃತ ನಕಲನ್ನು ನಿ ಡಿ -45 ಎಂದು, ಒಂದು ಇಸಿ ಯನ್ನು ಹಾಜರುಪಡಿಸಿದ್ದು ಅದನ್ನು ನಿ ಡಿ -46 ಎಂದು, ಈ ಸ್ವತ್ತಿನ ನಮೂನೆ -11 ಎ ಯನ್ನು ನಿ ಡಿ -47 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.